ಮಂತ್ರಿಗಳಲ್ಲಿ ಚಾಳಿ ಏನಾಗಿದೆ ಎಂದರೆ, ಸಾಮಾನ್ಯವಾಗಿ, ನಾವು ಕೊಡುವ ಉತ್ತರವನ್ನೇ ನೀವು ತೆಗೆದುಕೊಳ್ಳಬೇಕೆಂದು ಇದೆ. ಸ್ಪೆಸಿಫಿಕ್ ಆಗಿ ಉತ್ತರ ಕೊಡುವುದಿಲ್ಲ. ನಮ್ಮ ಮಾನ್ಯ ವೀರಭದ್ರಪ್ಪನವರು ಮಾಡುತ್ತೇನೆಂದು ಹೇಳುತ್ತಿರುವುದರಿಂದ ಅವರಲ್ಲಿ ವಿಶ್ವಾಸವಿಟ್ಟು ಮುಂದೆ ತೆಗೆದುಕೊಳ್ಳೋಣ.

ಅಂಕೋಲಾದಲ್ಲಿ ಬಸ್ ಡಿಪೋ ಪ್ರಾರಂಭ

66 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1998-99, 1999-2000 ದಲ್ಲಿ ರಾಜ್ಯದಲ್ಲಿ ಹೊಸ ಕೆ.ಎಸ್.ಆರ್.ಟಿ.ಸಿ. ಡಿಪೋಗಳನ್ನು ಎಲ್ಲೆಲ್ಲಿ ಪ್ರರಂಭಿಸಲಾಗಿದೆ?

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಹೊಸ ಕೆ.ಎಸ್.ಆರ್.ಟಿ.ಸಿ. ಡಿಪೋ ಪ್ರಾರಂಭ ಯಾವ ಹಂತದಲ್ಲಿದೆ?

ಇ) ಇದು ಇನ್ನೂ ಕಾರ್ಯಗತವಾಗದೇ ಇರಲು ಕಾರಣವೇನು?

ಈ) ಎಷ್ಟು ದಿವಸಗಳಲ್ಲಿ ಇದನ್ನು ಪ್ರರಂಭಿಸಲಾಗುವುದು ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) 1998-99 ಹಾಗೂ 1999-2000 ಸಾಲುಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳು ಈ ಕೆಳಕಂಡ ಹೊಸ ಡಿಪೋಗಳನ್ನು ಪ್ರಾರಂಭಿಸಿದೆ.

1998-99

ಹೊಳೆನರಸೀಪುರ, ಶ್ರೀನಿವಾಸಪುರ, ದೊಡ್ಡಬಳ್ಳಾಪುರ, ಗುಲ್ಬರ್ಗಾ 3ನೇ ಘಟಕ, ಬೆಳಗಾಂ ಮಿನಿ ಡಿಪೋ, ಬಿಜಾಪುರ 2ನೇ ಡಿಪೋ, ಯಲ್ಲಾಪುರ.

1999-2000

ಬಾಗೇಪಲ್ಲಿ, ಹುಣಸೂರು, ರಾಯಚೂರು 2ನೇ ಘಟಕ, ರಾಣೆಬೆನ್ನೂರ ಡಿಪ್ಪೋವನ್ನು ಹೊಸ ಡಿಪೋಗೆ ಸ್ಥಳಾಂತರಿಸಲಾಗಿದೆ.

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಬಸ್ ಘಟಕ ನಿರ್ಮಾಣಕ್ಕಾಗಿ ಅಂಕೋಲಾ ಪಟ್ಟಣದ ಹೊಸಗದ್ದೆ ಸರ್ವೆ ನಂ.25 : ಅ-1 : ಬ ದಲ್ಲಿ 5 ಎಕರೆ ಜಮೀನನ್ನು ಜಿಲ್ಲಾಧಿಕಾರಿ ಕಾರವಾರರವರು ಮಂಜೂರು ಮಾಡಿದ್ದರು. ಆದರೆ ಕೆನರಾ ವೆಲ್‌ಫೇರ್ ಸಂಸ್ಥೆಯವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ನಂ.23131 : 98ರ ಪ್ರಕಾರ ತಡೆಯಾಜ್ಞೆ ತಂದಿದ್ದರಿಂದ ಸದರಿ ಜಾಗಾ ಸಂಸ್ಥೆಯ ತಾಬಾಕ್ಕೆ ಪಡೆಯಲು ಸಾಧ್ಯವಾಗಿಲ್ಲ.

ತದನಂತರ ನ್ಯಾಯಾಲಯದಾಲ್ಲಿ ಪ್ರಕರಣವು ತೀರ್ಮಾನವಾಗಿ ತಡೆಯಾಜ್ಞೆಯು ತೆರವುಗೊಂಡನಂತರ ಜಿಲ್ಲಾಧಿಕಾರಿ, ಕಾರವಾರ ರವರಿಂದ ಈ ಜಾಗವನ್ನು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸುವ ಕ್ರಮ ಜರುಗಿಸಲಾಗುತ್ತದೆ.

ಇ) ಉಚ್ಚ ನ್ಯಾಯಾಲಯ, ಬೆಂಗಳೂರುದಿಂದ ತಡೆಯಾಜ್ಞೆ ತಂದಿದ್ದರಿಂದ ಜಮೀನು ಸ್ವಾಧೀನ ಪಡಿಸಿಕೊಳ್ಳಲು ತಡೆಯುಂಟಾಗಿದೆ.

ಈ) ಅಂಕೋಲಾ ಬಸ್ ಘಟಕವನ್ನು ನಿರ್ಮಿಸಲು ಉದ್ದೇಶಿಸಲಾದ ಜಮೀನನ್ನು ಜಿಲ್ಲಾಧಿಕಾರಿಗಳು, ಕಾರವಾರ ಸಂಸ್ಥೆಗೆ ಕಬ್ಜಾ ಕೊಟ್ಟನಂತರ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, 1998-99 ಮತ್ತು 1999-2000ನೇ ಇಸವಿಯೊಳಗೆ ರಾಜ್ಯದಲ್ಲಿ ಒಟ್ಟು ಎಷ್ಟು ಡಿಪೋಗಳನ್ನು ಪ್ರಾರಂಭ ಮಾಡಲಾಗಿದೆ ಎನ್ನುವ ವಿವರಗಳನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಎಷ್ಟು ಡಿಪೋಗಳನ್ನು ಪ್ರಾರಂಭಿಸಲು ಬಜೆಟ್‌ನಲ್ಲಿ ಅವಕಾಶವನ್ನು ಮಾಡಿಕೊಂಡಿದ್ದಾರೆ? ಎಷ್ಟು ಡಿಪೋಗಳನ್ನು ಪ್ರಾರಂಭಿಸಬೇಕೆಂದು ಯೋಜನೆಯನ್ನು ಮಾಡಿದ್ದಾರೆ? ಅದರೊಳಗೆ : 1998-99ರಲ್ಲಿ 7 ಡಿಪೋಗಳು ಪ್ರಾರಂಭವಾಗಿದೆ. 1999-2000ದಲ್ಲಿ 4 ಡಿಪೋಗಳು ಪ್ರಾರಂಭವಾಗಿದೆ. ಆದರೆ, ಎಷ್ಟನ್ನು ಪ್ರಾರಂಭಿಸಬೇಕೆಂದು ಯೋಜನೆಯನ್ನು ಮಾಡಿಕೊಂಡಿದ್ದೀರಿ, ಆರ್ಥಿಕ ಅವಕಾಶವನ್ನು ಕಲ್ಪಿಸಿಕೊಂಡಿದ್ದೀರಿ ಎನ್ನುವಂಥ ವಿವರಗಳನ್ನು ಹೇಳಬೇಕೆಂಬ ಒಂದು ಉಪ ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ. ಎರಡನೆಯದಾಗಿ, ನನ್ನ ಕ್ಷೇತ್ರ ಅಂಕೋಲದಲ್ಲಿ ಡಿಪೋ ಇಲ್ಲದೇ ಬಹಳ ದೊಡ್ಡ ಸಮಸ್ಯೆಗಳಾಗಿವೆ. ನಾನು ಹಿಂದಿನ ಸರ್ಕಾರದಲ್ಲೂ ಈ ವಿಷಯವನ್ನು ಗಮನಕ್ಕೆ ತಂದಾಗ ಅಲ್ಲೇ ಸ್ಥಳ ಇತ್ಯಾದಿ ಮಂಜೂರಾಯಿತು. ಅದಕ್ಕೆ ಇದ್ದಂತಹ ತಡೆಯಾಜ್ಞೆ ಈಗ ತೆರವುಗೊಂಡಿದೆ. ಹಾಗಾಗಿ ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ಆದೇಶವನ್ನು ಕೊಟ್ಟು ತಕ್ಷಣ ಜಾಗ ಹಸ್ತಾಂತರಿಸುವುದಕ್ಕೆ ಬೇಕಾದ ಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದು ಕೊಳ್ಳುತ್ತಾರೆಯೇ ಹೇಗೆ ಎಂದು ವಿವರಗಳನ್ನು ಕೇಳಬಯಸುತ್ತೇನೆ.

ಶ್ರೀ .ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಮ್ಮ ಸಂಸ್ಥೆಗೆ ಸಂಬಂಧಪಟ್ಟ ಡಿಪೋಗಳನ್ನು ನಿರ್ಮಿಸುವುದರ ಬಗ್ಗೆ ನಮ್ಮ ಆರ್ಥಿಕ ಅನುಕೂಲತೆಯ ಮೇರೆಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. 1998-99ನೇ ಸಾಲಿನಲ್ಲಿ 7 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅನೇಕ ಕಡೆ ಬಸ್ ಡಿಪೋಗಳು, ಬಸ್ ನಿಲ್ದಾಣಗಳನ್ನು ನಿರ್ಮಿಸುವುದರ ಬಗ್ಗೆ ತೀರ್ಮಾನವಾಗಿತ್ತು. ಆದರೆ, ಸಾರಿಗೆ ಸಂಸ್ಥೆಯು ಹೆಚ್ಚಿನ ಲುಕ್ಸಾನನ್ನು ಅನುಭವಿಸಿರುವುದರಿಂದ ಅನೇಕ ಕಡೆ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. 1999-2000 ದಲ್ಲಿ ಕೆಲವು ಭಾಗಗಳಲ್ಲಿ ತೆಗೆದುಕೊಳ್ಳಬೇಕಾದ ಘಟಕಗಳು, ಬಸ್ ನಿಲ್ದಾಣಗಳನ್ನು ನಿರ್ಮಿಸುವುದರ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ಆದರೆ, ಆರ್ಥಿಕ ಸ್ಥಿತಿ ಬಹಳ ಕಷ್ಟದಲ್ಲಿದ್ದುದರಿಂದ ನಾವು ಕೆಲವು ಭಾಗಗಳಲ್ಲಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಅನೇಕ ಗೌರವಾನ್ವಿತ ಶಾಸಕರುಗಳ ಬೇಡಿಕೆಗಳು, ನಮ್ಮ ರಾಜ್ಯದಲ್ಲಿ ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥ ಭಾಗಗಳಲ್ಲಿ ಬಸ್‌ನಿಲ್ದಾಣಗಳು

ಮತ್ತು ಬಸ್ ಘಟಕಗಳನ್ನು ಪ್ರಾರಂಭ ಮಾಡುವುದರ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸ್ತಾವನೆಗಳು ನನಗೆ ಬಂದಿವೆ. ಆದರೆ ಸಾರಿಗೆ ಇಲಾಖೆಯ ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ನಾವು ಒಂದು ಪಟ್ಟಿಯನ್ನು ಮಾಡಿದ್ದೇವೆ. ಅಗತ್ಯವಾಗಿ, ಸಾರಿಗೆ ಉದ್ಯಮದ ವ್ಯವಸ್ಥೆಗಾಗಿ ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲೂ ಸಹ ಘಟಕಗಳು ಮತ್ತು ಬಸ್ ನಿಲ್ದಾಣಗಳನ್ನು ನಾವು ನಿರ್ಮಿಸುವುದಕ್ಕಾಗಿ ಒಂದು ಯೋಜನೆಯನ್ನು ಸಿದ್ದಪಡಿಸಿಕೊಂಡು ಹುಡ್ಕೋದಿಂದ ಸಾಲ ಪಡೆಯುವಂಥ ಆಲೋಚನೆಯೂ ಇದೆ. ಅದಕ್ಕೆ ಒಂದು ಪ್ರಸ್ತಾವನೆಯನ್ನು ಸಿದ್ದಪಡಿಸುವ ಬಗ್ಗೆ ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಅದರಂತೆ ಮುಂದಿನ ದಿನಗಳಲ್ಲಿ ಈ ಬಸ್ ಘಟಕಗಳು ಮತ್ತು ಬಸ್ ನಿಲ್ದಾಣಗಳನ್ನು ಪ್ರಾರಂಭ ಮಾಡುವುದರ ಬಗ್ಗೆ ನಮ್ಮ ಸಾರ್ಕಾರಕ್ಕೆ ಆಸಕ್ತಿ ಇದೆ. ಅವರ ಬೇಡಿಕೆಯನ್ನು ಈಡೇರಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಒಂದು ಆಶ್ವಾಸನೆಯನ್ನು ಕೊಡುತ್ತೇನೆ.

10.20 ಎ.ಎಂ.

ಎರಡನೆಯದು, ಘಟಕಗಳನ್ನು ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ಜಾಗದ ಲಭ್ಯತೆಯ ಬಗ್ಗೆ ನಾವು ಜಿಲ್ಲಾಧಿಕಾರಿಗಳನ್ನು ಕೇಳಿಕೊಂಡಿದ್ದಾಗ ಒಂದು ಮೊಕ್ಕದ್ದಮೆಯನ್ನು ನ್ಯಾಯಾಲದಲ್ಲಿ ಹೂಡಲಾಗಿತ್ತು. ಆ ಮೊಕ್ಕದ್ದಮೆಯಲ್ಲಿ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಲಾಗಿತ್ತು. ಆಗ ತಡೆಯಾಜ್ಞೆ ತೆರವಾಗಿರಲಿಲ್ಲ. ದಿನಾಂಕ 8-3-2000 ಇಸವಿಯಲ್ಲಿ ಆ ತಡೆಯಾಜ್ಞೆಯನ್ನು ತೆರವುಗೊಳಿಸಲಾಗಿದೆ. ಆ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೋಸ್ಕರವಾಗಿ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಕೇಳಿದ್ದೇವೆ. ಅವರು ಜಾಗವನ್ನು ಒದಗಿಸಿಕೊಟ್ಟಲ್ಲಿ ನಾವು ತಕ್ಷಣ ಕೆಲಸ ಪ್ರಾರಂಭ ಮಾಡುವುದರ ಬಗ್ಗೆ ನನ್ನ ಇಲಾಖೆಗೆ ಆಸಕ್ತಿ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಗೀರ್ ಅಹಮದ್ ಅವರ ಬಗ್ಗೆ ನನಗೆ ಬಹಳ ಗೌರವವಿದೆ, ಏಕೆಂದರೆ ಮಾನ್ಯ ಸಿಂಧ್ಯಾರವರು ಸಾರಿಗೆ ಸಚಿವರಾಗಿದ್ದಾಗ ಪದೇ ಪದೇ ಇಲ್ಲಿ ಕುಳಿತು ಹೇಳುತ್ತಿದ್ದರು, 'ಸಿಂಧ್ಯಾರವರು ರೈಲು ಬಿಡಬಾರದು' ರೈಲು ಬಿಡಬಾರದು ಅಂತ. ಆದ್ದರಿಂದ ಈಗ ನನ್ನ ಅಪೇಕ್ಷೆ ಏನೆಂದರೆ, ಮಾನ್ಯ ಸಚಿವರು ಬಸ್ಸನ್ನೇ ಬಿಡಬೇಕೇ ಹೊರತು ರೈಲು ಬಿಡುವುದಕ್ಕೆ ಹೋಗಬಾರದು. ಮಾನ್ಯ ಅಧ್ಯಕ್ಷರೇ, ಕೆ.ಎಸ್.ಆರ್.ಟಿ.ಸಿ ಇತಿಹಾಸವನ್ನು ನೋಡಿದರೆ ಅದರ ಆರ್ಥಿಕ ಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವೆ? 7 ಕೋಟಿ ರೂಪಾಯಿಗಳ ಹಣವನ್ನು ತೆಗೆದಿಟ್ಟಿದ್ದರೂ ಸಹ ಅಲ್ಲಿ ಡಿಪೋ ಪ್ರಾರಂಭ ಮಾಡಲಿಲ್ಲ. ಆರ್ಥಿಕ ಸ್ಥಿತಿ ಸುಧಾರಣೆಯಾಗಲಿಲ್ಲ, ಅದಕ್ಕೆ ಡಿಪೋ ಶುರು ಮಾಡಲಿಲ್ಲವೆಂದು ಮಾನ್ಯ ಮಂತ್ರಿಯವರು ಹೇಳುತ್ತಾರೆ. ನನ್ನ ಕ್ಷೇತ್ರದ ಡಿಪೋ ಮತ್ತು ಆರ್ಥಿಕ ಸುಧಾರಣೆಯಾಗುವ ತನಕ ಹುಡ್ಕೋದವರು ವಿಶ್ವಬ್ಯಾಂಕ್‌ನವರು ಅಥವಾ ಬೇರೆ ಕಡೆ ಇವರಿಗೆ ಸಾಲ ಮಂಜೂರು ಮಾಡುವತನಕ ಡಿಪೋ ಪ್ರಾರಂಭ ಮಾಡದಿದ್ದರೆ ಅಲ್ಲಿನ ಜನ ಯಾವ ರೀತಿ ಓಡಾಡಬೇಕು? ಅಲ್ಲಿ ಬಸ್ಸಿನ ವ್ಯವಸ್ಥೆ ಸುಧಾರಿಸುವುದು ಬೇಡವೇ? ನನ್ನ ಸಲಹೆ ಏನೆಂದರೆ ಇಲ್ಲಿ ಆರ್ಥಿಕ ಸ್ಥಿತಿ ಸುಧಾರಣೆಯಾಗುವುದಕ್ಕೆ ಇವರು ಬಿಗುವಾದ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಏನೇನು ಆಗುತ್ತಿದೆ ಎನ್ನುವ ಬಗ್ಗೆ ಮಾನ್ಯ ಸಚಿವರಿಗೂ ಗೊತ್ತಿದೆ. ತಾವು

ಹುಡ್ಕೋ ಸಾಲ, ವಿಶ್ವಬ್ಯಾಂಕ್ ಸಾಲ ಮತ್ತು ನಬಾರ್ಡ್ ಸಾಲ ಅಂತ ಹೇಳದೆ, ಈಗ ನಿಮ್ಮ ಸರ್ಕಾರ ಸಾಲದ ಮೇಲೆಯೇ ನಡೆಯುತ್ತಿದೆಯಲ್ಲ, ಆ ರೀತಿಯಾದ ವಿವರಕ್ಕೆ ಹೋಗದೆ...

ಅಧ್ಯಕ್ಷರು : ಬಸ್ಸು ಘಟಕದ ಬಗ್ಗೆ ಮಾತನಾಡಿ, ಆರ್ಥಿಕ ಸುಧಾರಣೆ ಬಗ್ಗೆ ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) : ಮಾನ್ಯ ಅಧ್ಯಕ್ಷರೇ, ಹುಡ್ಕೋದಿಂದ ಸಾಲ ತೆಗೆದುಕೊಳ್ಳುತ್ತೇವೆಂದು ಅವರೇ ಹೇಳಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾವ ಯಾವ ಖಾತೆಗೆ ಯಾವ ಯಾವ ಸಂದರ್ಭದಲ್ಲಿ ಯಾರೇ ಬಂದಿದ್ದರೂ ಸಹ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವುದು ಅವರ ಕರ್ತವ್ಯ. ಮಾನ್ಯ ಸಿಂಧ್ಯಾರವರ ಕಾಲದಲ್ಲಿಯೂ ಸಹ ಈ ಸಾರಿಗೆ ವ್ಯವಸ್ಥೆ ಬಗ್ಗೆ ಉತ್ತಮವಾದ ಚಿಂತನೆಯನ್ನು ಮಾಡಿದ್ದಾರೆ, ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರ ಕ್ಷೇತ್ರದಲ್ಲಿ ಈ ಕೆಲಸ ಆಗದೇ ಇರುವುದಕ್ಕೆ ಕಾರಣವೇನು ಎನ್ನುವುದನ್ನು ಅವರು ಕೇಳುವುದಾದರೆ ನಾನು ಉತ್ತರ ಹೇಳುತ್ತೇನೆ. ಅಲ್ಲಿ ಬಸ್ ಘಟಕ ಪ್ರಾರಂಭ ಮಾಡುವುದರ ಬಗ್ಗೆ ಹಣದ ಲಭ್ಯತೆ ಬಗ್ಗೆ ಆಗಲೀ, ಸಾಲ ಪಡೆಯುವುದರ ಬಗ್ಗೆ ಆಗಲೀ ಅಥವಾ ಆ ಘಟಕವನ್ನು ನಿರ್ಮಾಣ ಮಾಡಿಕೊಡುವುದರ ಬಗ್ಗೆ ಆಗಲೀ ನನಗೆ ಯಾವುದೇ ಆತಂಕವಿಲ್ಲ. ತಾವು ಏನು ಜಾಗ ತೋರಿಸಿದಿರಿ ಆ ಜಾಗದ ಮೇಲೆ ಖಾಸಗಿ ಸಂಸ್ಥೆಯವರು ಅಂದರೆ ಕೆನರಾ ವೆಲ್‌ಫೇರ್ ಸಂಸ್ಥೆಯವರು ಮೊಕದ್ದಮೆ ಹೂಡಿರುವುದರಿಂದ, ಜಿಲ್ಲಾಧಿಕಾರಿಗಳು ಈ ಜಾಗವನ್ನು ಈ ಹಿಂದೆ 30 ವರ್ಷಗಳಿಗೆ ಗುತ್ತಿಗೆ ಮೇಲೆ ನೀಡಿರುವಂಥಾದ್ದು, ಆ ಗುತ್ತಿಗೆ 1989ನೇ ಇಸವಿಯಲ್ಲಿ ಪೂರೈಸಿರುವಂಥಾದ್ದು, ತದನಂತರ ಆ ಜಾಗವನ್ನು ಸಾರಿಗೆ ಇಲಾಖೆಗೆ ನೀಡಿರುವಂಥಾದ್ದು. ಆಗ ಅವರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿರುವಂಥಾದ್ದು ಇದೆ. ದಿನಾಂಕ 8-3-2000 ಇಸವಿಯಂದು ಈ ತಡೆಯಾಜ್ಞೆ ತೆರವಾಗಿದೆ. ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆ ಜಾಗವನ್ನು ನಮಗೆ ಬಿಡಿಸಿ ಕೊಡುವುದಕ್ಕೆ ಸೂಚನೆಯನ್ನು ನೀಡಿದ್ದೇವೆ. ಅವರು ಆ ಜಾಗವನ್ನು ತಕ್ಷಣ ಬಿಡಿಸಿ ನಮಗೆ ಹಸ್ತಾಂತರ ಮಾಡಿ ಕೊಟ್ಟ ತಕ್ಷಣವೇ ನಾವು ಕಾರ್ಯಕ್ರಮ ಹಮ್ಮಿಕೊಂಡು ನಿಮ್ಮ ಕೆಲಸವನ್ನು ಮಾಡಿಕೊಡುತ್ತೇವೆಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕಳೆದ ಎರಡು ವರ್ಷಗಳಲ್ಲಿ 11 ಘಟಕಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸಾರಿಗೆ ಸಚಿವರಿಗೆ ನನ್ನದೊಂದು ಸಲಹೆ ಏನೆಂದರೆ ಇನ್ನೂ 15-20 ಡಿಪೋಗಳು ವಿವಿಧ ಹಂತಗಳಲ್ಲಿ ನಿರ್ಮಾಣಗೊಳ್ಳುತ್ತಿವೆ. ಸಾರಿಗೆ ಸಂಸ್ಥೆಯಲ್ಲಿ ಮುಖ್ಯವಾಗಿ ಇರತಕ್ಕ ಸಮಸ್ಯೆ ಏನೆಂದರೆ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಕಡಿಮೆ ಇರುವುದು. ಈಗಾಗಲೇ ಸುಮಾರು 2-3 ಸಾವಿರ ಹುದ್ದೆಗಳು ಖಾಲಿ ಇವೆ. ಇನ್ನು 20 ಘಟಕಗಳನ್ನು ತಾವು ಪ್ರಾರಂಭ ಮಾಡಿದಾಗ ಸುಮಾರು 3 ಸಾವಿರ ಹುದ್ದೆಗಳು ಮತ್ತೆ ಬೇಕಾಗುತ್ತದೆ. ಒಟ್ಟು 5-6 ಸಾವಿರ ಹುದ್ದೆಗಳು ಖಾಲಿಯಾಗುತ್ತವೆ. ಮಾನ್ಯ ಮಂತ್ರಿಗಳಿಗೆ ನನ್ನದೊಂದು ಪ್ರಶ್ನೆ ಏನೆಂದರೆ ಈಗ ಸಾರಿಗೆ ಸಂಸ್ಥೆಗೆ ನಿರ್ಭಂದ ಹಾಕಿದ್ದೀರಿ,

ಗ್ರಾಮೀಣ ಪ್ರದೇಶದ ಯುವಕರಿಗೆ ಕೃಪಾಂಕ ಕೊಡುವುದರ ಬಗ್ಗೆ ನಿರ್ಭಂದ ಹಾಕಿದೆ. ಇದರ ಬಗ್ಗೆ ನಿಯಮಾವಳಿಗಳ ಅನುಸಾರವಾಗಿ ತಾತ್ಕಾಲಿಕವಾಗಿ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? ಈ ಬಗ್ಗೆ ಏನಾದರೂ ಯೋಜನೆ ಸಾರಿಗೆ ಸಂಸ್ಥೆ ಮುಂದೆ ಇದೆಯೇ? ಇಲ್ಲದಿದ್ದರೆ ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರ ಕಾಲದಲ್ಲಿಯೇ ಚಾಲಕರನ್ನು ಮತ್ತು ಕಂಡೆಕ್ಟ್‌ರ್ಸ್‌ನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿ ಈಗ ಸಂದರ್ಶನ ನಡೆದಿದೆ. ಅವರು ಹೇಳಿದಂತೆ ಚಾಲಕರು ಮತ್ತು ಕಂಡೆಕ್ಟ್‌ರ್ಸ್ ಕೊರತೆ ಇರುವ ವಿಚಾರ ನನ್ನ ಗಮನಕ್ಕೂ ಬಂದಿದೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ನಾನು ತಂದಿದ್ದೇನೆ. ರಾಜ್ಯದ ಅನೇಕ ಜನ ಯುವಕರಿಗೆ ಉದ್ಯೋಗವನ್ನು ಒದಗಿಸಿಕೊಡುವ ವಿಚಾರ ನಮ್ಮ ಮುಂದೆ ಇರುವಾಗ ಕೃಪಾಂಕದ ವಿಚಾರ ಸಹ ನಮ್ಮ ಮುಂದೆ ಇರುವುದರಿಂದ ಇದು ಸರಿಯಾಗುವವರೆಗೂ ನಾವು ಆ ಪಟ್ಟಿಯನ್ನು ಪ್ರಕಟ ಮಾಡುವ ಹಂತದಲ್ಲಿ ಇಲ್ಲ ಎನ್ನುವ ವಿಚಾರ ಸಹ ಮಾನ್ಯ ಸಿಂಧ್ಯಾರವರಿಗೆ ಗೊತ್ತಿದೆ. ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದೇನೆ, ಈ ಅಗತ್ಯ ಸೇವೆಗಳ ಕಾಯ್ದೆಯಡಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು; ಇವತ್ತು ಬಸ್ಸುಗಳು ಇದ್ದರೂ ಸಹ ನಮಗೆ ಚಾಲಕರ ಕೊರತೆ ಇದೆ. ಈಗಾಗಲೇ ಎರಡು ಸಾವಿರ ಚಾಲಕರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ನನ್ನ ಮುಂದಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬೇಡಿಕೊಂಡಿದ್ದೇನೆ. ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತದೆ, ಇದರಲ್ಲಿ ವಿದ್ಯಾರ್ಹತೆ 8 ಮತ್ತು 9 ಹಾಗೂ 10ನೇ ತರಗತಿಗಳು ಮಾತ್ರ ಇರುವುದರಿಂದ ಕೃಪಾಂಕದ ವಿಚಾರದಲ್ಲಿ ತಾವು ರಿಯಾಯಿತಿ ಕೊಡಬೇಕು, ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಅಗತ್ಯವಾಗಿ ಚಾಲಕರನ್ನು ಮತ್ತು ನಿರ್ವಾಹಕರ ಅಗತ್ಯತೆ ಇರುವುದರಿಂದ ಇದಕ್ಕೆ ತಾವು ಅನುಮತಿ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಸಹ ಅನುಮತಿಯನ್ನು ದೊರಕಿಸಿ ಕೊಡುತ್ತೇನೆಂದು ಹೇಳಿದ್ದಾರೆ. ಇನ್ನು ಒಂದೆರಡು ದಿನಗಳಲ್ಲಿ ಈ ಚಾಲಕರ ಮತ್ತು ನಿರ್ವಾಹಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ನಾನು ಪ್ರಯತ್ನಗಳನ್ನು ನಡೆಸುತ್ತೇನೆ ಎನ್ನುವ ವಿಚಾರವನ್ನು ನಾನು ಮಾನ್ಯ ಸಿಂಧ್ಯಾರವರ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, 1998-99ನೇ ಸಾಲಿನಲ್ಲಿ ಡಿಪೋಗಳಿಗೆ ಈ ಕ್ರಿಯಾ ಯೋಜನೆಯಲ್ಲಿ ಇಟ್ಟಿದ್ದ ಮೊತ್ತದಲ್ಲಿ ಹೆಚ್ಚಿನ ಕಡೆ ಯಾವುದೇ ಕೆಲಸಕಾರ್ಯಗಳು ಆಗಿಲ್ಲ. ಇದು ನನ್ನ ಗಮನಕ್ಕೆ ಬಂದಿದೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿರುವಂತಹ ಪುತ್ತೂರಿಗೆ ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಕಳೆದ ಎರಡು ವರ್ಷಗಳಿಂದ ಯಾವುದೇ ಕೆಲಸಗಳನ್ನು ಅಲ್ಲಿ ಮಾಡಲಿಲ್ಲ. ನಾವು ಪದೇ ಪದೇ ಹೇಳಿದರೂ ಸಹ ಯಾವುದೇ ಅಧಿಕಾರಿಗಳು ಭೇಟಿ ಮಾಡಲಿಲ್ಲ. ಸುಬ್ರಮಣ್ಯದಲ್ಲಿ ಅದಕ್ಕಾಗಿ 40 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು ಅಲ್ಲಿಯೂ ಸಹ ಯಾವುದೇ ಕೆಲಸಗಳನ್ನು ಮಾಡಲಿಲ್ಲ. ಧರ್ಮಸ್ಥಳದಲ್ಲಿ ಸಹ ಯಾವುದೇ ಕೆಲಸ ಆಗಿಲ್ಲ, ಅಲ್ಲಿ

ಕೆಲಸಗಳು ಯಾವ ಯಾವ ಹಂತದಲ್ಲಿದೆ ಎನ್ನುವುದು ತಮ್ಮ ಗಮನದಲ್ಲಿದೆ. ತಾವು ಆ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡಂತಹ ಎಲ್ಲಾ ಕೆಲಸಗಳನ್ನು ಮುಟ್ಟಲಿಲ್ಲ. ಈಗ ತಾವು ಹೇಳುತ್ತಿದ್ದೀರಿ ನಾವು ಅಲ್ಲಿ ಕೆಲಸ ಶುರು ಮಾಡಿದ್ದೇವೆ ಇಲ್ಲಿ ಕೆಲಸ ಶುರು ಮಾಡಿದ್ದೇವೆಂದು. ಇದರಿಂದ ತಮ್ಮ ಉತ್ತರಗಳು ಸತ್ಯಕ್ಕೆ ಬಹಳ ದೂರ ಅಂತ ಕಾಣಿಸುತ್ತದೆ. ಅವರು ಹೇಳಿದ್ದರಲ್ಲಿ ದೊಡ್ಡ ಗಾಡಿ ಬಿಡುತ್ತಿದ್ದೀರಿ ಅಂತ ಆದರೆ 'ನನಗೆ ಸಣ್ಣ ಗಾಡಿ ಬಿಡುತ್ತಿದ್ದೀರಿ' ಅಂತ ಅನಿಸುತ್ತದೆ.

ಶ್ರೀ ಸಿ.ಆರ್ ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಬಹಳ ಮಹತ್ವವಿದೆ. ಇಲ್ಲಿ ಆಡಿದಂತಹ ಮಾತಿಗೂ ಅಷ್ಟೇ ಗೌರವವಿದೆ. ಈ ಬಗ್ಗೆ ರೈಲು ಬಿಡುವಂತಹ ಪ್ರಶ್ನೆಯು ಬರುವುದಿಲ್ಲ. ಏರೋಪ್ಲೇನ್ ಬಿಡುವಂತಹ ಪ್ರಶ್ನೆಯೂ ಬರುವುದಿಲ್ಲ. ನಾವು ನಮ್ಮ ಬಜೆಟ್ ಮಂಡನೆ ಮಾಡುತ್ತಿರುವುದು ಈ ಒಂದನೇ ಎಪ್ರಿಲ್ ತಿಂಗಳಿನಿಂದ. ಹಿಂದಿನ ಆಯುವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಟ್ಟಿದ್ದರು ಆ ಮೀಸಲಿಟ್ಟಿದ್ದಂತಹ ಹಣದಲ್ಲಿ ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಅಷ್ಟು ಮಾಹಿತಿಯನ್ನು ನಾನು ತಮಗೆ ಕೊಟ್ಟಿದ್ದೇನೆ. ಇಲ್ಲಿ ರೈಲು ಬಿಡುವಂತಹ ಮಾತು ಇಲ್ಲವೇ ಇಲ್ಲ. ಹಾಗೆ ಮೀಸಲಿಟ್ಟಿದ್ದಂತಹ ಹಣದಲ್ಲಿ ನಾವು ಯಾವ ಯಾವ ಭಾಗದಲ್ಲಿ ಕೆಲಸ ತೆಗೆದುಕೊಳ್ಳಬೇಕಾಗಿತ್ತೋ ಅಲ್ಲಿ ಕೆಲಸವನ್ನು ತೆಗೆದುಕೊಂಡಿದ್ದೇವೆ. ಪುನಃ ಈ ಸದನದ ವಿರೋಧಪಕ್ಷದ ಉಪ ನಾಯಕರು ಒಂದು ವಿಚಾರವನ್ನು ಹೇಳಿದ್ದಾರೆ. ಸುಬ್ರಮಣ್ಯದ ವಿಚಾರ ಹೇಳಿದ್ದಾರೆ, ಧರ್ಮಸ್ಥಳದ ವಿಚಾರ ಹೇಳಿದ್ದಾರೆ, ಪುತ್ತೂರು ವಿಚಾರ ಹೇಳಿದ್ದಾರೆ. ಈ ಮೂರು ಬಸ್ಸು ಘಟಕಗಳ, ಅಥವಾ ಬಸ್ಸು ನಿಲ್ದಾಣಗಳ ಪ್ರಸ್ತಾವನೆ ನನ್ನ ಮುಂದಿದೆ. ಈಗಾಗಲೇ ನಾನು ಧರ್ಮಸ್ಥಳಕ್ಕೆ ಭೇಟಿ ಕೊಟ್ಟು ಜಾಗ ವೀಕ್ಷಣೆ ಮಾಡಿದ್ದೇನೆ. ಆ ಸ್ಥಳದಲ್ಲಿ ಬಸ್ಸು ಡಿಪೋ ಮತ್ತು ಬಸ್ಸು ನಿಲ್ದಾಣ ಆಗುವಂತಹ ಅಗತ್ಯವಿದೆ. ಅಲ್ಲಿ ನನ್ನ ಕಷ್ಟ ಏನಿದೆ ಅಂದರೆ ಅಲ್ಲಿ ಲೆವಲಿಂಗ್ ಮಾಡುವುದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ. ನಾನು ಧರ್ಮಸ್ಥಳದ ಧರ್ಮಾಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಅದರ ಬಗ್ಗೆ ಸರ್ಕಾರಕ್ಕೆ ಸ್ವತಃ ಆಸಕ್ತಿ ಇದೆ. ಅಲ್ಲಿ ಉತ್ತಮವಾದ ಒಂದು ಬಸ್ಸು ನಿಲ್ದಾಣ ಮತ್ತು ಬಸ್ಸು ಘಟಕ ಬೇಕಾಗಿದೆ ಅಂತ ಬೇಡಿಕೆ ಏನಿದೆ ಇದರ ಬಗ್ಗೆ ಸರ್ಕಾರಕ್ಕೂ ಸಹ ವಿಶೇಷ ಆಸಕ್ತಿ ಇರುವುದರಿಂದ ಮುಂದಿನ ದಿನಗಳಲ್ಲಿ ನಾವು ಕೆಲಸ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ವಿರೋಧಪಕ್ಷದ ಉಪನಾಯಕರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಉದಾಹರಣೆಗೆ ಹೇಳಬೇಕೆಂದರೆ ಪುತ್ತೂರಿನಲ್ಲಿ ಈಗ ಇರುವಂತಹ ಡಿಪೋದಲ್ಲಿ 110-112 ಬಸ್ಸುಗಳನ್ನು ಮಾತ್ರ ನಿಲ್ಲಿಸುವುದಕ್ಕೆ ಸಾಧ್ಯವಿದೆ. ತಮ್ಮ ಸಹಕಾರದಿಂದ ಮತ್ತು ಮಾನ್ಯ ಸಿಂಧ್ಯಾರವರ ಸಹಕಾರದಿಂದ ಅಲ್ಲಿ ಸುಮಾರು 130 ಬಸ್ಸುಗಳು ಇವೆ. ಆದರೆ ಆ ಬಸ್ಸುಗಳನ್ನು ನಿಲ್ಲಿಸುವುದಕ್ಕೆ ಸ್ಥಳವಿಲ್ಲ. 1998-99ನೇ ಸಾಲಿನಲ್ಲಿ ಅದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳ ಹಣವನ್ನು ಕಾದಿರಿಸಲಾಗಿತ್ತು. ಅದನ್ನು ಬೇರೆ ಬೇರೆ ರೀತಿಯಲ್ಲಿ ವಿನಿಯೋಗ ಮಾಡುತ್ತೇವೆ ಮತ್ತು ಲೆವಲಿಂಗ್ ಮಾಡುವುದಕ್ಕೆ ಇಂಜಿನೀಯರಿಂಗ್ ಡಿವಿಜನ್ ಜೊತೆ ಮಾತನಾಡುತ್ತೇನೆಂದು ಹೇಳಿದರು. ಆದರೆ ಇದುವರೆಗೂ ಅಲ್ಲಿ ಯಾವ ಕೆಲಸಗಳು ಸಹ ಆಗಲಿಲ್ಲ.

ಅಧ್ಯಕ್ಷರು : ತಾವು ಬೇರೆ ಪ್ರಶ್ನೆ ಕೇಳಿದರೆ ಅವರು ಉತ್ತರ ಹೇಳುತ್ತಾರೆ. ಈಗ ತಾವು ಈ ಎಲ್ಲಾ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಎಲ್ಲಿರುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ನಾನು ಹೇಳುವುದು ಏನೆಂದರೆ ಅದಕ್ಕಾಗಿ ಕಾದಿರಿಸಿದ ಮೊತ್ತವನ್ನು ವಿನಿಯೋಗ ಮಾಡಲಿಲ್ಲ ಎನ್ನುವುದು ನನ್ನ ಆರೋಪ. 1998-99ನೇ ಸಾಲಿನಲ್ಲಿ ಬೇರೆ ಬೇರೆ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಏನು ಹಣವನ್ನು ಕಾದಿರಿಸಲಾಗಿತ್ತೋ ಆ ಮೊತ್ತವನ್ನು ತಾವು ವ್ಯಯ ಮಾಡಲಿಲ್ಲ ಎನ್ನುವುದು ನನ್ನ ಆರೋಪ. ಪುತ್ತೂರಿನ ಡಿಪೋಗೆ ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಸುಬ್ರಮಣ್ಯಕ್ಕೆ 40 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಆ ಹಣವನ್ನು ವಿನಿಯೋಗ ಮಾಡಿದ್ದೀರಾ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ಉಪನಾಯಕರು ಹೇಳಿರುವಂತಹ ಪ್ರಶ್ನೆ ನನ್ನ ಗಮನದಲ್ಲಿದೆ. ನಾನು ಸ್ವತಃ ಸ್ಥಳ ವೀಕ್ಷಣೆ ಮಾಡಿ ಮುಂದಿನ ವರ್ಷಗಳಲ್ಲಿ ಸಾರಿಗೆ ಸಂಸ್ಥೆ ವತಿಯಿಂದ ಆಗಬೇಕಾದಂತಹ ಕೆಲಸಗಳನ್ನು ಪೂರೈಸಿ ಕೊಡುತ್ತೇನೆ.

ಅಧ್ಯಕ್ಷರು : ತಾವು 10 ನಿಮಿಷಗಳಿಗೂ ಹೆಚ್ಚು ಕಾಲ ತೆಗೆದುಕೊಂಡಿರಿ. ಈ ರೀತಿ ಆದರೆ ನಾನು ಸಭೆಯನ್ನು ಹೇಗೆ ನಡೆಸುವುದು?..... ಮಾನ್ಯ ಬಸವರಾಜು ಅವರೇ ತಾವು ಈಗ ಪಿರಿಯಾಪಟ್ಟಣದ ಬಗ್ಗೆ ಪ್ರಶ್ನೆ ಕೇಳಿದರೆ ಅವರು ಹೇಗೆ ಉತ್ತರ ಕೊಡುತ್ತಾರೆ? ತಾವು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೂಡುತ್ತಾರೆ.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ನಾನು ಬೇಗ ಮುಗಿಸುತ್ತೇನೆ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಹೊಸ ಡಿಪೋ ಆಗಬೇಕೆಂದು ಹೇಳಿ ಡಿಪೋ ಮಂಜೂರಾಗಿದ್ದರೂ ಕೂಡ, ನಾವು ಸ್ಥಳ ಮಂಜೂರು ಮಾಡಿ ಕೊಟ್ಟಿದ್ದರೂ ಸಹ ಏನೂ ಕೆಲಸಕಾರ್ಯಗಳು ಆಗಲಿಲ್ಲ.

ಮಾನ್ಯ ಅಧ್ಯಕ್ಷರೇ ಎರಡು ವರ್ಷಗಳ ಹಿಂದೆ ಮೈಸೂರು ಜಿಲ್ಲೆ ಪಿರಿಯಾಪಟ್ಟಣದಲ್ಲಿ ಹೊಸ ಡಿಪೋ ಮಂಜುರಾಗಿದ್ದರೂ ಕೂಡ, ಅದಕ್ಕೆ ಸ್ಥಳ ಮಂಜೂರು ಆಗಿದ್ದರೂ ಕೂಡ ಅದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತು ಕಾಮಗಾರಿಯನ್ನು ಪ್ರಾರಂಭಿಸಿಲ್ಲ ಅದರ ಬಗ್ಗೆ ಸರ್ಕಾರದ ಕ್ರಮವೇನು? ಎಂಬುದನ್ನು ದಯವಿಟ್ಟು ತಿಳಿಸಿ.

ಅಧ್ಯಕ್ಷರು : ತಾವುಗಳು ಪಿರಿಯಾಪಟ್ಟಣದ ಬಗ್ಗೆ ಕೇಳಿದರೆ ಅವರಲ್ಲಿ ಉತ್ತರವು ಇರುತ್ತದೆಯೇ? ಇಲ್ಲಿ ಪ್ರಸ್ತಾಪ ಮಾಡಿದ ಪ್ರಶ್ನೆಗೆ ಸೀಮಿತವಾಗಿ ಉಪಪ್ರಶ್ನೆಗಳನ್ನು ಕೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅವರ ಕ್ಷೇತ್ರಕ್ಕೆ ನಾನು ಸ್ವತಃ ಭೇಟಿ ನೀಡಿ, ವೀಕ್ಷಣೆ ಮಾಡಿ ತತ್‌ಕ್ಷಣ ಆ ಕೆಲಸ ಆಗುವುದರ ಬಗ್ಗೆ ಪ್ರಯತ್ನಿಸುತ್ತೇನೆ.